


ಹೊಸ ತಲೆಮಾರಿನ ಗಮನಸೆಳೆದಿರುವ 'ಹೌ ಐ ಮೆಟ್ ಯುವರ್ ಮದರ್' ಇಂಗ್ಲಿಷಿನ ಕಾಮಿಡಿ ಸರಣಿ

ಕೆಲಸ ಮಾಡುವವರಿಗೆ ಇಷ್ಟವಾಯಿತು. ಈ ಸರಣಿಯನ್ನು ನೋಡಿದ ಮೇಲೆ ಎಷ್ಟೋ ಜನ ಅಂಕಲ್ ಸೀರೀಸ್ ಅನ್ನು ನೋಡಿದರು. ಇದರಲ್ಲಿ ನಾನು ತುಂಟತನವನ್ನು ಹಿತಮಿತವಾಗಿ ಬಳಸಿದ್ದೆ. ನಮ್ಮದೇ ಪರಿಸರದ, ಕುಟುಂಬದ ಕತೆಗಳನ್ನು ಕಟ್ಟುತ್ತಾ ಒಪ್ಪಿತವಾದ ಹಾಸ್ಯವನ್ನು ತುಳುಕಿಸುವ ಸವಾಲಿನ ವಿಷಯವಿದು.' ಇದಿಷ್ಟು ಪುನೀತ್ ಮಾಡುವ ವಿಶ್ಲೇಷಣೆ.

ಲಾಕ್‌ಡೌನ್ ಕಾಲದಲ್ಲೂ ಮನೆಯಲ್ಲೇ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದ ಸುಮುಖಿ ಸುರೇಶ್ ಅವರನ್ನೇ ಫೋನ್ ಮೂಲಕ ಮಾತಿಗೆಳೆದಾಗ ಅವರು, ಈ ರೀತಿಯ ಭಾವಭಾಷೆಯ ಕುರಿತ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ಹೆಚ್ಚು ಕಾಲ ಬೇಕು ಎಂದರು. ಹೆಣ್ಣುಮಕ್ಕಳು ಈ ರೀತಿ ಜೋಕ್ ಮಾಡುತ್ತಿದ್ದಾರೆ ಎನ್ನುವುದಕ್ಕೆ ಯಾಕೆ ತಲೆಬಿಸಿ ಮಾಡಿಕೊಳ್ಳಬೆಕು ಎನ್ನುವುದು ಅವರು ಹಾಕುವ ಮರುಪ್ರಶ್ನೆ. ನಗಿಸುವ ಧರ್ಮದವರಿಗೆ ಅದಕ್ಕೆ ಬೇಕಾದ ಕಂಟೆಂಟ್ ಕಟ್ಟಿಕೊಳ್ಳುವ ಉಸಾಬರಿಯೂ ಇರುತ್ತದಲ್ಲ ಎನ್ನುವ ಅವರು, ಇದು ಮಾರುಕಟ್ಟೆ ಪ್ರಣೀತವಾದ ಹಾಸ್ಯ ಇರಲೂಬಹುದು ಎಂದೂ ಮನದಟ್ಟು ಮಾಡಿಸುತ್ತಾರೆ. ಇಂತಹ ಜೋಕ್‌ಗಳು ಸಹಜವಾಗಿ ಇರದೆ, ಕೃತಕವೆನ್ನಿಸಿದರೆ ಕೇಳುಗರು ಮುಖ ತಿರುಗಿಸುತ್ತಾರಷ್ಟೆ ಎನ್ನುವುದು ಅವರ ಅನುಭವದ ಮಾತು.

'ನಮ್ದುಕೆ' ಎನ್ನುವ ತಂಡದಲ್ಲಿ ಕನ್ನಡದ



'ನಮ್ದುಕೆ' ಮೂಲಕ ಹಾಸ್ಯ ರಸಾಯನ ಉಣಬಡಿಸುವ ಶ್ರವಣ್ ಐತಾಳ್